ದಿನಾಂಕ 2.11.2013ರಂದು ದಾಖಲಿಸಿರುತ್ತಾರೆ. ನೂತನ ಪೊಲೀಸ್ ಠಾಣೆ, ಬೀದರ ಇಲ್ಲಿ ದಾಖಲಾದ ಮೊಕದ್ದಮೆ ಸಂಖ್ಯೆ, 277/2 ತನಿಖೆ ಹಂತದಲ್ಲಿದ್ದು, ಪೋಲೀಸರಿಂದ ಆರೋಪ ಪಟ್ಟಿ ಜಾರಿ ಮಾಡಬೇಕಾಗಿರುತ್ತದೆ. ಟ್ಯಾಂಕರ್‌ನಲ್ಲಿದ್ದ ಕಲುಷಿತ ನೀರು ಯಾವ ಕಾರ್ಖಾನೆಯದೆಂದು ಸಾಬೀತಾಗಿರುವುದಿಲ್ಲ.

ಇ) ಸಮರ್ಪಕವಾದ ಮಾಲಿನ್ಯ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿಲ್ಲದ ಹಾಗೂ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಗುಣಮಟ್ಟಕ್ಕೆ ಸಂಸ್ಕರಿಸದ ಉದ್ದಿಮೆಗಳಿಗೆ ಕಾರಣ ಕೇಳುವ ಹಾಗೂ ಉದ್ದೇಶಿತ ಮುಚ್ಚುವ ಆದೇಶವನ್ನು ನೀಡಿ ನಂತರ ದಿನಾಂಕ: 05–2–2014 ರಂದು ಮಂಡಳಿಯಲ್ಲಿ ಮೌಖಿಕ ವಿಚಾರಣೆ ಸಭೆಗೆ ಕರೆದು ಸೂಕ್ತ ಮಾಲಿನ್ಯ ವ್ಯವಸ್ಥೆಗಳನ್ನು ಹೊಂದಲು ಹಾಗೂ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ನಿರ್ದೇಶನ ನೀಡಲಾಗಿದೆ. ತಪ್ಪಿತಸ್ಥ ಆರು (6) ಕೈಗಾರಿಕೆಗಳಿಗೆ ಈಗಾಗಲೇ ಮುಚ್ಚುವ ಆದೇಶವನ್ನು ನೀಡಲಾಗಿದೆ. ಕೈಗಾರಿಕೆಗಳನ್ನು ನಿಯಮಿತವಾಗಿ ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕಾನೂನಿನ ಅಡಿಯಲ್ಲಿ ಜರುಗಿಸಲಾಗುತ್ತಿದೆ.

ಕೆರೆ ತುಂಬುವ ಯೋಜನೆ

2120 (1826); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಸಕಾಲಕ್ಕೆ ಮಳೆಯಾಗದಿರುವುದರಿಂದ ಕೆರೆಗಳು ಬತ್ತಿ ಜಾನುವಾರುಗಳಿಗೆ ಹಾಗೂ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕೆರೆಗಳಿಗೆ ನದಿಯಿಂದ ನೀರನ್ನು ತುಂಬಿ ಜಾನುವಾರುಗಳಿಗೆ ಹಾಗೂ ರೈತರಿಗೆ ನೀರಾವರಿಗಾಗಿ ಅನುಕೂಲ ಕಲ್ಪಿಸಿ ಕೊಡಲು ಯೋಜನೆಗಳನ್ನು ಸರ್ಕಾರವು ರೂಪಿಸಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; (ವಿವರ ನೀಡುವದು)?

ಶ್ರೀ ಶಿವರಾಜ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಸಕಾಲಕ್ಕೆ ಮಳೆಯಾಗದಿರುವುದರಿಂದ ಕೆರೆಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುತ್ತದೆ. ಹಾಗೆಯೇ ಜಲಸಂಪನ್ಮೂಲ ಇಲಾಖೆಯಡಿ ಬರುವ ಮಲಪ್ರಭಾ ಯೋಜನಾ ವಲಯದ ವ್ಯಾಪ್ತಿಯಲ್ಲಿ ಪಟ್ಟಿಹಾಳ ಕೆರೆಯು ಬರುತ್ತಿದ್ದು, ಇದು ಸಹ ಮಳೆಯಾಶ್ರಿತ ಕೆರೆಯಾಗಿದ್ದು, ಮಳೆ ಇಲ್ಲದೆ ಬತ್ತಿ ಹೋಗಿರುತ್ತದೆ.

ಆ) ಕೆರೆಗಳಿಗೆ ನದಿಯಿಂದ ನೀರನ್ನು ತುಂಬಿಸುವ ಯಾವುದೇ ಯೋಜನೆಗಳು ಸಣ್ಣ ನೀರಾವರಿ/ ಜಲಸಂಪನ್ಮೂಲ ಇಲಾಖೆಯ ಕರ್ನಾಟಕ ನೀರಾವರಿ ನಿಗಮ ನಿಯಮಿತದ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ನೇಕಾರರ ಭವನ ಸ್ಥಾಪಿಸುವುದು

2123 (3459); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ರಾಜ್ಯದಲ್ಲಿ ನೇಕಾರರ ಭವನ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ;

ಆ) ಹಾಗಿದ್ದಲ್ಲಿ, ಎಲ್ಲಿ ಸ್ಥಾಪಿಸಲಾಗುವುದು;

ಇ) 2013–14 ಹಾಗೂ 2014–15 ನೇ ಸಾಲುಗಳಲ್ಲಿ ಸದರಿ ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು;